For more job news visit : www.kpscvaani.com

ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ.,

ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು-570001 ದೂ.ಸಂಖ್ಯೆ : 0821-2425261

ನೇಮಕಾತಿ ಪ್ರಕಟಣೆ

ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ., ಮೈಸೂರು. ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ನೊಂದಾಯಿತ ಅಂಚೆ ಮೂಲಕ ಹುದ್ದೆವಾರು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಈ ಹುದ್ದೆಗಳನ್ನು ಸರ್ಕಾರಿ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ + ಗ್ರೇಡ್ ಪೇ ಮತ್ತು ಮೂಲ ವೇತನ	ವರ್ಗಗಳ ವಿವರ
1.	ಶಾಖಾ ವ್ಯವಸ್ಥಾಪಕರು	01	9300-34800 + 4200/Level 6 (VII CPC) pay Matrix Rs 35400/-	ಸಾಮಾನ್ಯ-01
2.	ಲೆಕ್ಕಿಗರು	04	9300-34800 + 4200/Level 6 (VII CPC) pay Matrix Rs 35400/-	ಸಾಮಾನ್ಯ-04
3.	ಹಿರಿಯ ನಗದುಗಾರರು	01	9300-34800 + 4200/Level 6 (VII CPC) pay Matrix Rs 35400/-	ಸಾಮಾನ್ಯ-01
4.	ಕಂಪ್ಯೂಟರ್ ಮೇಲ್ವಿಚಾರಕರು	01	5200-20200 + 2800/Level 5 (VII CPC) pay Matrix Rs 29200/-	ಸಾಮಾನ್ಯ-01
5.	ಕಿರಿಯ ಗುಮಾಸ್ತರು	10	5200-20200 + 1900/Level 2 (VII CPC) pay Matrix Rs 19900/-	ಸಾಮಾನ್ಯ-09 ಪರಿಶಿಷ್ಟ ಪಂಗಡ-01
6.	ಕಛೇರಿ ಸಹಾಯಕರು	04	5200-20200 + 1800/Level 1 (VII CPC) pay Matrix Rs 18000/-	ಸಾಮಾನ್ಯ-03 ಪರಿಶಿಷ್ಟ ಜಾತಿ-01
	ಒಟ್ಟು	21		

1.ವಿದ್ಯಾರ್ಹತೆ :

ಶಾಖಾ ವ್ಯವಸ್ಥಾಪಕರು :

(i)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪಡೆದಿರಬೇಕು.

(ii)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

(iii)ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಮಾಡಿರಬೇಕು.

(iv)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದ ಸಹಾಯದಲ್ಲಿ ಪದವಿ ಪಡೆದಿದ್ದರೆ ಅಂಥ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.

ಲೆಕ್ಕಿಗರು:

(i)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪಡೆದಿರಬೇಕು.(ವಾಣಿಜ್ಯ, ಸಹಕಾರ/ನಿರ್ವಹಣೆ ಪದವಿ ಹೊಂದಿರಬೇಕು.)

(ii)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

(iii)ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಮಾಡಿರಬೇಕು.

(iv)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದ ಸಹಾಯದಲ್ಲಿ ಪದವಿ ಪಡೆದಿದ್ದರೆ ಅಂಥ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.

ಹಿರಿಯ ನಗದುಗಾರರು:

(i)ಭಾರತದ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪಡೆದಿರಬೇಕು.

(ii)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

(iii)ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಮಾಡಿರಬೇಕು.

(iv)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದ ಸಹಾಯದಲ್ಲಿ ಪದವಿ ಪಡೆದಿದ್ದರೆ ಅಂಥ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.

ಕಂಪ್ಯೂಟರ್ ಮೇಲ್ವಿಚಾರಕರು:

ಕಾನೂನಿನಡಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯದಿಂದ ಕಂಪ್ಯೂಟರ್ ಅಪ್ಲಿಕೇಷನ್, ಬಿ.ಎಸ್.ಸಿ/ಬಿ.ಸಿ.ಎ/ಬಿ.ಇ ಇನ್ ಕಂಪ್ಯೂಟರ್ ಸೈನ್ಸ್ ನಲ್ಲಿ ಪದವಿಯನ್ನು ಪಡೆದಿರಬೇಕು.

ಕಿರಿಯ ಗುಮಾಸ್ತರು:

(i)ದ್ವಿತೀಯ ಪಿ.ಯು.ಸಿ ಯಲ್ಲಿ ಉತ್ತೀರ್ಣರಾಗಿರಬೇಕು.

(ii)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

(iii)ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಮಾಡಿರಬೇಕು.

ಕಛೇರಿ ಸಹಾಯಕರು:

ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

2.ವಯೋಮಿತಿ : 1.ಅಭ್ಯರ್ಥಿಯು ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ 18 ವರ್ಷಗಳನ್ನು ಪೂರ್ಣಗೊಳಿಸಿರಬೇಕು.

2.ಅಭ್ಯರ್ಥಿಯು ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಕೆಳಕಂಡಂತೆ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಅ) ಪ.ಜಾತಿ/ಪ.ಪಂಗಡ, ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು 40 ವರ್ಷಗಳನ್ನು ಮೀರಿರಬಾರದು.

ಆ) ಪ್ರವರ್ಗ 2ಎ, 2ಬಿ, 3ಎ, ಮತ್ತು 3ಬಿ ಅಭ್ಯರ್ಥಿಗಳು 38 ವರ್ಷಗಳನ್ನು ಮೀರಿರಬಾರದು.

ಇ)ಇತರೆ ವರ್ಗದ ಅಭ್ಯರ್ಥಿಗಳು ಹಾಗೂ ಸಾಮಾನ್ಯ ವರ್ಗದವರು 35 ವರ್ಷಗಳನ್ನು ಮೀರಿರಬಾರದು.

ಈ) ವಯೋಮಿತಿಯಲ್ಲಿ ರಿಯಾಯಿತಿ ಕೇಳುವವರು, ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣಪತ್ರ ಲಗತ್ತಿಸಬೇಕು.

3. ಅರ್ಜಿ ಶುಲ್ಕ

ಸಾಮಾನ್ಯ (ಇತರೆ) ಪ್ರವರ್ಗ 2(ಎ),2(ಬಿ),3(ಎ)(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	ರೂ.1000/-
ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಅಂಗವಿಕಲರು ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	ರೂ. 500/-

4. ಅರ್ಜಿ ಶುಲ್ಕವನ್ನು ಪಾವತಿಸುವ ವಿಧಾನ : ಅರ್ಜಿಶುಲ್ಕವನ್ನು ಡಿ ಡಿ/ಪೇ ಆರ್ಡರ್ ಮುಖಾಂತರ ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ, ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ, ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು ಇವರಿಗೆ ಪಾವತಿಸುವುದು.

5.ಅರ್ಜಿಸಲ್ಲಿಸುವ ವಿಧಾನ : ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿರುವ ಅರ್ಜಿ ನಮೂನೆಯಲ್ಲಿ ಸೂಚನೆಗಳನ್ನು ಕಡ್ಡಾಯ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿಮಾಡತಕ್ಕದ್ದು.

ಅರ್ಜಿ ಸಲ್ಲಿಸಲು ನಿಗಧಿ ಪಡಿಸಿದ ಪ್ರಾರಂಭಿಕ ದಿನಾಂಕ	07.06.2023
ಅರ್ಜಿ ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ	28.06.2023

ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 28.06.2023ರ ಸಂಜೆ 5.30ವಂಟಿಯೊಳಗೆ ದೃಢೀಕೃತ ಅಂಚೆ ಮೂಲಕ ಸ್ವೀಕೃತಿಯಾಗುವಂತೆ ಸದಸ್ಯ ಕಾರ್ಯದರ್ಶಿ ನೇಮಕಾತಿ ಸಮಿತಿ ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ನಿ, ಶೇಷಾದ್ರಿ ಐಯ್ಯರ್ ರಸ್ತೆ ಮೈಸೂರು-570001 ಇವರಿಗೆ ಸಲ್ಲಿಸತಕ್ಕದ್ದು, ತದನಂತರ ಸ್ವೀಕೃತಿಯಾಗುವ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ:- ಅಭ್ಯರ್ಥಿಗಳು ಅರ್ಜಿಯನ್ನು ನಿಗಧಿತ ಕೊನೆಯ ದಿನಾಂಕಕ್ಕೆ ಸ್ವೀಕೃತಿಯಾಗುವಂತೆ ನೋಡಿಕೊಳ್ಳುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.

6.ಆಯ್ಕೆ ವಿಧಾನ : i) ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ 85% ಕ್ಕೆ ಮಾರ್ಪಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಆಹ್ವಾನಿಸಲಾಗುವುದು ಮೌಖಿಕ ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಕೂಡಿಸಿ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮದಂತೆ ಪ.ಜಾತಿ ಮತ್ತು ಪ.ಪಂಗಡದವರಿಗೆ ಮೀಸಲಾತಿಯನ್ನು ನಿಗಧಿಪಡಿಸಿ ಆಯ್ಕೆ ಮಾಡಲಾಗುವುದು. ಲಿಖಿತ ಪರೀಕ್ಷೆ ಈ ಪಠ್ಯವನ್ನು ಒಳಗೊಂಡಿರುತ್ತದೆ.

ಕ್ರಮ ಸಂಖ್ಯೆ	ವಿಷಯ	ಅಂಕಗಳು
1)	ಕನ್ನಡ ಭಾಷೆ	50
2)	ಸಾಮಾನ್ಯ ಇಂಗ್ಲಿಷ್	25
3)	ಸಾಮಾನ್ಯ ಜ್ಞಾನ	25
4)	ಸಹಕಾರ	50
5)	ಭಾರತದ ಸಂವಿಧಾನ	25
6)	ಬ್ಯಾಂಕಿನ ಕಾರ್ಯ ಚಟುವಟಿಕೆ ಬಗ್ಗೆ	25

ii) ಕಛೇರಿ ಸಹಾಯಕರಿಗೆ 100 ಅಂಕಗಳ ಕನ್ನಡ ಜ್ಞಾನ ಪರೀಕ್ಷೆ ನಡೆಸಲಾಗುವುದು.

ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಹಾಜರಾಗಿದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು. ಲಿಖಿತ ಪರೀಕ್ಷೆ ಮತ್ತು ಸಂದರ್ಶನ ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಲಿಖಿತ ಪರೀಕ್ಷೆಗೆ ಹಾಗೂ ಸಂದರ್ಶನಕ್ಕೆ ತಿಳುವಳಿಕೆ ಪತ್ರ ಬರೆದ ಇದ್ದಲಿ ನಿಮ್ಮ ಅರ್ಜಿಯು ಅಂಗೀಕಾರವಾಗಿರುವುದಿಲ್ಲ ಎಂದು ತಿಳಿಯತಕ್ಕದ್ದು.

7. ಸಾಮಾನ್ಯ ಸೂಚನೆಗಳು.

1. ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

2. ಒಬ್ಬ ವ್ಯಕ್ತಿ ಒಂದೇ ಹುದ್ದೆಗೆ ಅರ್ಜಿ ಸಲ್ಲಿಸತಕ್ಕದ್ದು ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಕಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಬ್ಯಾಂಕಿನ ಮಾಹಿತಿ ಹಾಗೂ ಸೂಚನೆಗಳನ್ನು ಅರಿಯದೆ ತಪ್ಪುಗಿದ್ದಲ್ಲಿ ಬ್ಯಾಂಕು ಜವಾಬ್ದಾರರಾಗುವುದಿಲ್ಲ.

4.ಅಭ್ಯರ್ಥಿಯು ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಗೆ ಅಂಟಿಸಿ ಕೆಳಗೆ ಕಾಣಿಯ ಹೆಸರನ್ನು ಸಹಿ ಮಾಡಿ ಸಲ್ಲಿಸುವುದು ಹಾಗೂ 3 ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ಜೊತೆ ಲಗತ್ತಿಸುವುದು. ಸರಿಯಾಯಿದ ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ, ಅಂಗಾಯ ಪ್ರಮಾಣ ಪತ್ರ ಇತ್ಯಾದಿಗಳನ್ನು ಗೆಜಿಟೆಡ್ ಅಧಿಕಾರಿಯಿಂದ ದೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸಬೇಕು ಸಂದರ್ಶನಕ್ಕೆ ಆರ್ಹರಾದಾಗ ಆ ಸಮಯದಲ್ಲಿ ಅವುಗಳ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಹಾಜರಿ ಪಡಿಸಬೇಕು. ಆನಂತರ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೆಯೆ ಯಾವುದೇ ಮೀಸಲಾತಿ ಪ್ರಮಾಣ ಪತ್ರಗಳು ನಿಗಧಿ ಪಡಿಸಿದ ನಮೂನೆಯಲ್ಲಿ ಇರದಿದ್ದಾಗ ಸದರಿ ಮೀಸಲಾತಿಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

5.ಆಕೋಚಿಯ ಮೇಲೆ ಯಾವ ಹುದ್ದೆಗಾಗಿ ಅರ್ಜಿ ಸಲ್ಲಿಸುತ್ತಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಮತ್ತು ಅಕ್ಷರದಲ್ಲಿ ನಮೂದಿಸತಕ್ಕದ್ದು.

8. ಟಿಪ್ಪಣಿ

1. ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೆ ಮುಂದೂಡುವ ಮತ್ತು ರದ್ದು ಗೊಳಿಸುವ ಅಧಿಕಾರವನ್ನು ನೇಮಕಾತಿ ಸಮಿತಿ ಹೊಂದಿರುತ್ತದೆ. ಆ ರೀತಿ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಿದ ಸಂದರ್ಭದಲ್ಲಿ ಮಾತ್ರ ಅರ್ಜಿದಾರರು ಪಾವತಿಸಿದ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದು.

2.ಅಭ್ಯರ್ಥಿಗಳು ತಮ್ಮ ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3.ಅಭ್ಯರ್ಥಿಗಳು ಅರ್ಜಿಗಳಲ್ಲಿ ಅರ್ಜೂರ ಮಾಹಿತಿ ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4.ಬ್ಯಾಂಕಿನ ಮಾಹಿತಿ ಹಾಗೂ ಸೂಚನೆಗಳನ್ನು ಅರಿಯದೆ ತಪ್ಪುಗಿದ್ದಲ್ಲಿ ಬ್ಯಾಂಕು ಜವಾಬ್ದಾರರಾಗುವುದಿಲ್ಲ.

9. ಅರ್ಹತಾ ಷರತ್ತುಗಳು.

1.ಭಾರತೀಯ ಪ್ರಾಜೋಕರಾಗಿರತಕ್ಕದ್ದು.

2.ಒಬ್ಬ ಜೀವಂತ ಪತ್ನಿಗಿಂತ ಹೆಚ್ಚುಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಮತ್ತು ಈಗಾಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯಲ್ಲಿ ಹೇಳಿದಂತೆ ಇದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.

3.ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ನಿರ್ವಹಣೆಗೆ ಅತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

4.ದೃಷ್ಟಿಕವಾಗಿ ಅಶಕ್ತರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಬ್ಯಾಂಕು ಕಾಯ್ದುಕೊಳ್ಳಿಕೊಂಡಿದೆ.

5.ನಿಗಧಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

10. ಗರ್ಮತೆ.

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಿಲಾದ ದಸ್ತಾವೇಜು ಸಲ್ಲಿಸುವನೆಂದು ಅಥವಾ ತಮ್ಮ ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ /ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸಂಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅವನು/ಅವಳು ಸ್ವತಃ ಸಿವಿಲ್ ದ್ವಾವಹಾರಗಳಿಗೆ ಮತ್ತು ಶಿಸ್ತುಕ್ರಮಕ್ಕೆ ಒಳಪಡುವುದಲ್ಲದೆ ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವದನ್ನು ರದ್ದುಪಡಿಸಲಾಗುವುದು.

ಸದಸ್ಯಕಾರ್ಯದರ್ಶಿ
ನೇಮಕಾತಿ ಸಮಿತಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ
ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ನಿ., ಮೈಸೂರು.

ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ನಿ.,
ಶೇಷಾದ್ರಿ ಐಯ್ಯರ್ ರಸ್ತೆ ಮೈಸೂರು-570001
ಅರ್ಜಿ ನಮೂನೆ

ಇತ್ತೀಚಿನ ಭಾವಚಿತ್ರ

ಹುದ್ದೆಯ ಹೆಸರು----------ಗಾಗಿ ಅರ್ಜಿ.

1	ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)	
2	ತಂದೆ/ಕಾಯಿ/ಗಂಡನ ಹೆಸರು	
3	ಪೂರ್ಣ ಅಂಚೆ ವಿಳಾಸ (ದೊಬ್ಬೆಲ್/ದೂರವಾಣಿ ಸಂಖ್ಯೆಯೊಂದಿಗೆ)	
4	ಶಾಶ್ವತ ವಾಸದ ವಿಳಾಸ	
5	ವಿಳಾಸ ಪುರಾವೆ ಪ್ರತಿ (ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ಪಡಿತರ ಕಾರ್ಡ್/ಡಿ.ಎಲ್)	
6	ಹುಟ್ಟಿದ ದಿನಾಂಕ (ಎಸ್.ಎಸ್.ಎಲ್.ಸಿ ಅಂಕಪಟ್ಟಿ ಇತ್ಯಾದಿ ಲಗತ್ತಿಸುವುದು)	
7	ದಿನಾಂಕ 31.05.2023 ಕ್ಕೆ ಇದ್ದಂತೆ ಆಗಿರುವ ವಯಸ್ಸು	
8	ಪುರುಷ ಅಥವಾ ಮಹಿಳೆ	
9	ವಿದ್ಯಾರ್ಹತೆ	

		ಸರಿಸಾಟಿ (ಒಟ್ಟು)	ಪಡೆದ ಅಂಕ	ಶೇಕಡ (%)
	ಎಸ್.ಎಸ್.ಎಲ್.ಸಿ			
	ದ್ವಿತೀಯ ಪಿ.ಯು.ಸಿ			
	ಪದವಿ:			
	ಸ್ನಾತಕೋತ್ತರ ಪದವಿ			
	(ಅಂಕಪಟ್ಟಿಗಳ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು)			

10	ಕಂಪ್ಯೂಟರ್ ಜ್ಞಾನ ಹೊಂದಿದ್ದಾರೆಯೇ ಇದಲ್ಲಿ ಈ ಬಗ್ಗೆ ಅಂಗೀಕೃತ ಸಂಸ್ಥೆಯಿಂದ ಪ